

# ಅಂತರಿಕ್ಷದ ಆಟಗಳು



ಗೆಲಾಕ್ಸಿ ಎಕ್ಸ್‌ಪ್ರೆಸ್
ವೆಕೇಷನ್ ಬೈಬಲ್ ಸ್ಕೂಲ್
ಕರಪತ್ರ ಆಟಗಳು

# ಆಟಗಳು


ಅಂತರಿಕ್ಷದ ಆಟಗಳು



## ಆಟದ ಆಯ್ಕೆಗಳು, ದಿನ 1


### ಒಂದು ಪದವನ್ನು ಮಾಡಿ ತೋರಿಸಿರಿ

ಪ್ರತೀ ತಂಡದಿಂದ ಮೂವರು ಮಕ್ಕಳನ್ನು ಕರೆದು, ವೇದಿಕೆಯ ಮೇಲೆ ಆ ಮಕ್ಕಳನ್ನು ನಿಲ್ಲಿಸಿರಿ ಮತ್ತು ಅವರಿಗೆ ಕೊಡಲ್ಪಟ್ಟಿರುವ 2 ಅಕ್ಷರಗಳ ಪದವನ್ನು ಅವರ ಅಭಿನಯದಿಂದ ಮಾಡಿ ತೋರಿಸ ಬೇಕೆಂದು ಹೇಳಿರಿ. ಅಲ್ಲಿ ಅದೇ ಆಟವನ್ನು ಅನೇಕಬಾರಿ ಆಡಿಸಬಹುದು. ಮತ್ತು ಪ್ರತೀ ತಂಡವು ಅಲ್ಲಿರುವ ಗಡಿಯಾರದೊಂದಿಗೆ ಪೈಪೋಟಿ ಪಡಬೇಕಾದ ಅವಶ್ಯಕತೆ ಇರುತ್ತದೆ.
ಅಲ್ಲಿರುವ ನಾಯಕನು ಹೋಗು ಎಂದು ಹೇಳಿದಾಗ, ನಾಯಕನು ಒಂದು ತಂಡಕ್ಕೆ ಆ ಪದವನ್ನು ತಿಳಿಸುವನು, ಆಗ ಅವರು ಏನನ್ನು ಮಾತನಾಡದೇ ಅವರ ಶರೀರಗಳಿಂದ ಅಭಿನಯವನ್ನು ಮಾಡುವದರ ಮೂಲಕ ಆ ಪದವನ್ನು ತಿಳಿಸಬೇಕಾಗಿರುತ್ತದೆ. ಪ್ರೇಕ್ಷಕರಾಗಿರುವ ತಂಡವು ಮಾತ್ರವೇ ಆ ಪದವನ್ನು ಗುರುತಿಸಬೇಕು. ಅವರು ಹೇಳಿರುವದು ಸರಿಯಾಗಿದ್ದರೆ, ನಾಯಕನು ಗಡಿಯಾರವನ್ನು ನಿಲ್ಲಿಸಿ, ಅವರು ಎಷ್ಟು ಸೆಕೆಂಡುಗಳಲ್ಲಿ ಸರಿಯಾದ ಪದವನ್ನು ಗುರುತಿಸಿದ್ದಾರೆನ್ನುವದನ್ನು ಬರೆದುಕೊಳ್ಳುವನು.
ಒಂದುವೇಳೆ ನಿಮ್ಮ ತಂಡಗಳು ಹುಡುಗರಿಗೆ ವಿರುದ್ಧ ಹುಡುಗಿಯರು ಎಂದಾಗಿದ್ದರೆ, ಉದಾಹರಣೆಗೆ ಹುಡುಗಿಯರಿಗೆ ಒಂದು ಪದ ಸಿಗುತ್ತದೆ, ಮತ್ತು ವೇದಿಕೆಯ ಮೇಲಿರುವ 3 ಹುಡುಗಿಯರು ತಮ್ಮ ದೇಹಗಳ ಮೂಲಕ ಪದ/ವಸ್ತುವನ್ನು ರೂಪಿಸಬೇಕು ಮತ್ತು ಪ್ರೇಕ್ಷಕರಲ್ಲಿರುವ ಹುಡುಗಿಯರು ಮಾತ್ರವೇ ಆ ಪದ ಏನು ಎಂಬದನ್ನು ಕೂಗಿ ಹೇಳಬೇಕು. ಒಂದುವೇಳೆ ಹುಡುಗರು ಭಾಗವಹಿಸಿದರೆ, ಅವರು ಹುಡುಗಿಯರು ಗೆಲ್ಲಲು ಸಹಾಯ ಮಾಡಬೇಕು. ಕೆಲವು 3 ಅಕ್ಷರದ ಪದಗಳು ಯಾವುವೆಂದರೆ: ಸಿಂಹ, ಗುಲಾಬಿ, ನಕ್ಷತ್ರ, ಇತ್ಯಾದಿ.



### ರುಚಿ ಪರೀಕ್ಷೆ


ಪ್ರತೀ ತಂಡದಿಂದ ಒಬ್ಬೊಬ್ಬರನ್ನು ವೇದಿಕೆಯ ಮೇಲಕ್ಕೆ ಬರುವಂತೆ ಆಹ್ವಾನಿಸಿರಿ. ವಿವಿಧವಾದ ಅಡುಗೆಗಳನ್ನು ಮಾಡಿ ಅಲ್ಲಿ ಸಿದ್ಧಪಡಿಸಿರಿ. ಅವರಿಗೆ ಕಾಣದಂತೆ ಆ ಅಡುಗೆಗಳನ್ನು ಬಚ್ಚಿಟ್ಟಿರ್ರಿ. ಮತ್ತು ಇಬ್ಬರು ವಿದ್ಯಾರ್ಥಿಗಳ ಕಣ್ಣುಗಳಿಗೆ ಏನಾದರೂ ಕಟ್ಟಿ, ಅವರನ್ನು ಮುಂದಕ್ಕೆ ಕರೆದುಕೊಂಡು ಬನ್ನಿರಿ. ಒಂದು ಅಡುಗೆಯನ್ನು ಮಾತ್ರ ಆ ವೇದಿಕೆಯ ಮೇಲಕ್ಕೆ ತೆಗೆದುಕೊಂಡು ಬನ್ನಿರಿ, ಆಗ ಆ ವಿದ್ಯಾರ್ಥಿಗಳು ಅವುಗಳನ್ನು ರುಚಿ ನೋಡಿ, ಅದು ಯಾವ ಅಡುಗೆಯೆಂದು ಹೇಳಬೇಕು. ಉಳಿದ ಎಲ್ಲಾ ವಿದ್ಯಾರ್ಥಿಗಳು ಅದು ಏನೆಂದು ಹೊರಗೆ ಹೇಳಬಾರದು, ಯಾಕಂದರೆ ಅದು ಇನ್ನೂ ಸವಾಲಾಗಿ ಇರುವದಕ್ಕೆ ಪ್ರಯತ್ನಿಸಿರಿ. (ನಿಮ್ಮ ತರಗತಿಯವರು ಉತ್ತರ ಹೇಳದಂತೆ ನೋಡಿಕೊಳ್ಳಿರಿ!) ಪ್ರತೀ ವಿದ್ಯಾರ್ಥಿ ಒಂದುಸಲ ಮಾತ್ರ ಉತ್ತರವನ್ನು ಹೇಳುವದಕ್ಕೆ ಅವಕಾಶವಿರುತ್ತದೆ. ಅವರು ಉತ್ತರ ಹೇಳುವದಕ್ಕೆ ಕೇವಲ 10 ಸೆಕೆಂಡ್ಗಳ ಸಮಯವನ್ನು ಮಾತ್ರವೇ ಕೊಡಿರಿ. ಒಂದುವೇಳೆ ಏನಾದರೂ ಚಲ್ಲಿಹೋದರೆ ಹೊರಸುವದಕ್ಕೆ ಆ ಸ್ಥಳದಲ್ಲಿ ನ್ಯಾಪ್ಕಿನ್ಗಳನ್ನು ಅಥವಾ ಟವಲ್ಗಳನ್ನು ಇಟ್ಟುಕೊಳ್ಳಿರಿ. ಆ ವಿದ್ಯಾರ್ಥಿಗಳು ಇನ್ನೂ ಹೆಚ್ಚಾದ ಅಡುಗೆಗಳನ್ನು ರುಚಿ ನೋಡುವದಕ್ಕೆ ಅನುಕೂಲ ಮಾಡಿರಿ. ಹೆಚ್ಚಿನ ಅಡುಗೆಗಳನ್ನು ಯಾವ ತಂಡದವರು ಕಂಡುಹಿಡಿಯುವರೋ ಅವರೇ ಗೆಲ್ಲುವರು.



## ಆಟದ ಆಯ್ಕೆಗಳು, ದಿನ 2


### ಕುಡಿಯುವ ರಿಲೇ ಪಂದ್ಯ

ಸಾಲಾಗಿ ನಿಲ್ಲಿಸಿ, ಪ್ರತಿಯೊಂದು ತಂಡದಿಂದ 3 ಮಕ್ಕಳನ್ನು ಉಪಯೋಗಿಸಿಕೊಳ್ಳಿರಿ. ಕೋಣೆಯ ಮತ್ತೊಂದು ಬದಿಯಲ್ಲಿ ಪ್ರತಿಯೊಂದು ತಂಡಕ್ಕೆ ಒಂದು ಮೇಜಿನ ಮೇಲೆ ಬಾಟಲಿ/ಜಗ್ ನಲ್ಲಿ ನೀರಿ ತುಂಬಿಸಿ ಇಡಿರಿ. ಭಾಗವಹಿಸುವ ಪ್ರತಿಯೊಂದು ಮಗುವಿಗೆ ಪೇಪರ್ ಲೋಟ (ಉಪಯೋಗಿಸಿ ಬಿಸಾಡುವ ಲೋಟವನ್ನು) ಕೊಡಿರಿ.
ತಂಡದಲ್ಲಿರುವ ಮೊದಲನೆಯ ಮಗು ನಾಯಕನು ವಿಶಲ್ ಊದುವ ತನಕ ಮೇಜಿನ ಬಳಿಗೆ ಓಡಿಹೋಗಬೇಕು ಮತ್ತು ನೀರು ಕುಡಿಯಲು ಪ್ರಾರಂಭಿಸಬೇಕು. ನಂತರ ಹಿಂದಕ್ಕೆ ಓಡಿ ಬರಬೇಕು ಮತ್ತು ನಂತರದ ಮಗು ಓಡಿ ಹೋಗಬೇಕು ಮತ್ತು ನೀರು ಕುಡಿಯಲು ಪ್ರಾರಂಭಿಸಬೇಕು ಇತ್ಯಾದಿ. ತಮ್ಮ ಬಾಟಲಿ/ಜಗ್ ನಲ್ಲಿ ಸಮಯ ಮುಗಿದ ನಂತರ ಕಡಿಮೆ ನೀರು ಉಳಿದಿರುವ – ಮೊದಲು ನೀರನ್ನು ಮುಗಿಸುವ ತಂಡ ಜಯಶಾಲಿಯಾಗುತ್ತದೆ!



### ಬಾಳೆ ಹಣ್ಣು ತಿನ್ನುವ ಪಂದ್ಯ


ಒಂದೊಂದು ಗುಂಪಿನಿಂದ ಒಂದು ಮಗುವನ್ನು ಎನ್ನಿಸಿಕೊಳ್ಳಿರಿ, ಅವರು ಬಾಳೆ ಹಣ್ಣಿನ ಸಿಪ್ಪೆ ಬಿಡಿಸಿ ಹಣ್ಣನು ತಿನ್ನಬೇಕು. ಆದರೆ ಅವರ ಒಂದು ಕೈ ಹಿಂಬದಿಯಲ್ಲಿರಬೇಕು. ನಾಯಕನು 'ಹೋಗು' ಎಂದು ಹೇಳಿದ ಕೂಡಲೆ, ಮಕ್ಕಳೆಲ್ಲ ಒಂದು ಕೈ ಮತ್ತು ಹಲ್ಲುಗಳನ್ನು ಉಪಯೋಗಿಸಿ ಬಾಳೆ ಹಣ್ಣಿನ ಸಿಪ್ಪೆ ಬಿಡಿಸಲು ಆರಂಭಿಸಬೇಕು. ಆ ಸಿಪ್ಪೆಯನ್ನು ಬಿಡಿಸಿದ ಕೂಡಲೆ, ಅವರು ಗೆಲ್ಲಲು ಆ ಪುರ್ತಿ ಹಣ್ಣನ್ನು ತಿನ್ನಬೇಕು.



## ಆಟದ ಆಯ್ಕೆಗಳು, ದಿನ 3


### ವಿನೋದಾತ್ಮಕವಾದ ಶಬ್ದಗಳು

ಮುಂಚಿತವಾಗಿಯೇ ಈ ಶಬ್ದಗಳ ಪಟ್ಟಿಯನ್ನು ನಾಯಕನೇ ಸಿದ್ಧಗೊಳಿಸುವನು :
1. ಕೆಮ್ಮು. 2. ಬಿಕ್ಕಳಿಸು 3. ತೇಗು. 4. ಸೀನು 5. ಚಪ್ಪಾಳೆ 6. ಆಗಲಿಸು. 7. ಮುಸಿ ನಗು 8. ಪಾದ ಶಬ್ದ 9. ಗಂಟಲು ಸವರಣೆ.
6 ಮಂದಿ ಆಟಗಾರರನ್ನು ಸಾಲಾಗಿ ನಿಲ್ಲಿಸಿರಿ, ಪ್ರತೀ ತಂಡದಿಂದ ಮೂವರನ್ನು ಆಯ್ಕೆ ಮಾಡಿಕೊಳ್ಳಿರಿ, ಆ ಎರಡು ತಂಡದ ವಿದ್ಯಾರ್ಥಿಗಳನ್ನು ಒಂದು ತಂಡದ ವಿದ್ಯಾರ್ಥಿ ಆದನಂತರ ಮತ್ತೊಂದು ತಂಡದ ವಿದ್ಯಾರ್ಥಿಯನ್ನು ಆ ರೀತಿ ಆರು ಮಂದಿಯನ್ನು ನಿಲ್ಲಿಸಿರಿ. ನೀವು ಮಾಡಿದ ಪಟ್ಟಿಯ ಕ್ರಮಾನುಗುಣವಾಗಿಯೇ ಅವರು ಆ ಶಬ್ದಗಳನ್ನು ಉಚ್ಛರಿಸಬೇಕೆಂದು ಆ ಆಟಗಾರರಿಗೆ ಸೂಚಿಸಿರಿ. ಪಟ್ಟಿಯಲ್ಲಿರುವ ಮೊದಲನೆಯ ಶಬ್ದವನ್ನು ಮಾಡಿರಿ. ಅಲ್ಲಿರುವ ಪ್ರತಿಯೊಬ್ಬ ಆಟಗಾರನು ವ್ಯಕ್ತಿಗತವಾಗಿ ಆ ರೀತಿಯ ಶಬ್ದವನ್ನು ಮಾಡುವದಕ್ಕೆ ಹೇಳಿರಿ. ಆದನಂತರ ಮೊದಲನೇಯ ಶಬ್ದವನ್ನು ಮಾಡುವದರೊಂದಿಗೆ ಎರಡನೇಯ ಶಬ್ದವನ್ನು ಮಾಡಬೇಕೆಂದು ಹೇಳಿರಿ, ಆ ರೀತಿ ಎಲ್ಲಾ ಶಬ್ದಗಳನ್ನು ಮಾಡಬೇಕೆಂದು ತಿಳಿಸಿರಿ. ಆದನಂತರ ಮೂರನೇಯ ಶಬ್ದವನ್ನು ಆ ಎರಡು ಶಬ್ದಗಳೊಂದಿಗೆ ಮಾಡಬೇಕು, ಹೀಗೆಯೇ ಎಲ್ಲಾ ಶಬ್ದಗಳನ್ನು ಮುಂದೆವರಿಸಬೇಕು. ಒಂದುವೇಳೆ ಒಬ್ಬ ಆಟಗಾರನು ಶಬ್ದ ಮಾಡದಿದ್ದಲ್ಲಿ, ಅಥವಾ ಮರೆತು ಹೋದಲ್ಲಿ, ಅಥವಾ ಕ್ರಮಾನುಗುಣವಾಗಿ ಹೇಳದಿದ್ದಲ್ಲಿ, ಆ ಆಟಗಾರನು ಸೋತು ಹೋದಂಥೆ ಅರ್ಥ. ಒಬ್ಬ ಆಟಗಾರನು ಮಾತ್ರ ಗೆಲ್ಲುವಂಥೆ ಅಥವಾ ಉಳಿಯುವಂಥೆ ಶಬ್ದಗಳನ್ನು ಜೋಡಿಸುತ್ತಾ ಇಡಿರಿ. ಯಾರು ಆ ಶಬ್ದಗಳನ್ನು ಕ್ರಮಾನುಗುಣವಾಗಿ ಹೇಳುವರೋ, ಆ ತಂಡದವರೇ ಗೆಲ್ಲುವರು!



### ತಲೆಗೆ ಅಂಟಿಸಿಕೊಳ್ಳುವದು


ಪ್ರತೀ ತಂಡದಿಂದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡು, ಅವರ ಹಣೆಯ ಮೇಲೆ ಮತ್ತು ಗಲ್ಲದ ಪ್ರಾಂತ್ಯದಲ್ಲಿ ಮಾಸ್ಕಿಂಗ್ ಟೇಪ್ನು ಕಟ್ಟಿರಿ (ಅಂಟುಕೊಳ್ಳುವ ಪ್ರಾಂತ್ಯ ಹೊರಗಡೆಯಿರುವಂಥೆ ಕಟ್ಟಬೇಕು). ಒಂದು ಮೇಜಿನ ಮೇಲೆ ಕಾಗದದ ತುಂಡುಗಳನ್ನು ಹಾಕಿರಿ. ಮೇಜಿನ ಹಿಂಭಾಗದಲ್ಲಿ ಅವರು ನಿಂತುಕೊಳ್ಳುವಾಗ, ಅವರ ಮುಖಗಳನ್ನು ಪ್ರೇಕ್ಷಕರ ಕಡೆಗೆ ಇಟ್ಟು ನೋಡುತ್ತಿರುವಾಗ, ಅವರ ಕೈಗಳನ್ನು ಬೆನ್ನಪ್ಪಿಕೊಳ್ಳುಬೇಕೆಂದು ಆಟಗಾರರಿಗೆ ಹೇಳಿರಿ. ನೀವು "ಹೋಗಿರಿ" ಎಂದು ಆಟಗಾರರಿಗೆ ಹೇಳಿದಾಗ, ಆ ಮೇಜಿನ ಸುತ್ತಾ ಅವರ ತಲೆಗಳನ್ನು ಆಡಿಸಬೇಕು. ಆಗ ಅವರು ತಮ್ಮ ತಲೆಗೆ ಎಷ್ಟು ಸಾಧ್ಯವಾದರೇ ಅಷ್ಟು ಕಾಗದದ ತುಂಡುಗಳನ್ನು ಅಂಟಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಯಾರು ಎಷ್ಟು ಹೆಚ್ಚಾಗಿ ಕಾಗದದ ತುಂಡುಗಳನ್ನು ಕೊಟ್ಟಿರುವ ಸಮಯದಲ್ಲಿ ಅಂಟಿಸಿಕೊಳ್ಳುವರೋ ಅವರೇ ಗೆಲ್ಲುತ್ತಾರೆ.
(ಒಂದು ವೇಳೆ ಮಗುವಿಗೆ ಉದ್ದಾವಾದ ಕೂದುಲಿದ್ದರೆ, ಟೇಪ್ ಕಟ್ಟುವದಕ್ಕೆ ಮುಂಚೆ ಅವುಗಳನ್ನು ಹಿಂದಕ್ಕೆ ಎಳೆದು, ಮತ್ತೇ ಅಡ್ಡವಾಗಿರದಂಥೆ ಚೆನ್ನಾಗಿ ಕಟ್ಟಿರಿ.)



## ಆಟದ ಆಯ್ಕೆಗಳು, ದಿನ 4


### ಪೇಪರ್ ತಳ್ಳುವಿಕೆ

ಎರಡು ತಂಡದಿಂದ ಒಬ್ಬೊಬ್ಬರಾಗಿ, ಇಬ್ಬರು ಮಕ್ಕಳು ಭಾಗವಹಿಸಬೇಕು. ಮಕ್ಕಳು ಮರದ ಹಲಿಗೆಯ ಮೇಲೆ ನಿಲ್ಲಬೇಕು (2" ಕ್ಕೆ 6"). ಎದುರುಗಡೆ ಇರುವ ವ್ಯಕ್ತಿಯ ತಲೆಯ ಮೇಲೆ ಹೊಡೆಯದೆ ಕತ್ತಿಯಂತೆ ಸುತ್ತಲಾಗಿರುವ ದಿನ ಪತ್ರಿಕೆಯನ್ನು ಕತ್ತಿಯೆಂದು ತಿಳಿದು ಅದರ ಬಳಕೆಯಿಂದ ಹಲಗೆಯ ಮೇಲಿಂದ ಅವನನ್ನು ಕೆಳಗೆ ಬೀಳಿಸಬೇಕು.
ಒಂದು ಕಾಲು ನೆಲಕ್ಕೆ ತಾಗಿದರೂ ಆಟಗಾರನು ಆಟದಿಂದ ಹೊರ ನಡೆಯಬೇಕು. ಉಳಿಯುವ ಆಟಗಾರನು ಗೆಲ್ಲುವ ಸಲುವಾಗಿ ತನ್ನ ಸಮತೋಲನವನ್ನು ಹಲಗೆಯ ಮೇಲೆ ಕಾಪಾಡಿಕೊಳ್ಳಬೇಕು. ಹಲಗೆಯನ್ನು ಬಹಳ ಎತ್ತರದಲ್ಲಿ ಇಡಬೇಡಿರಿ, ಅದರಿಂದ ಮಕ್ಕಳಿಗೆ ಗಾಯಗಳಾಗುವದನ್ನು ತಡೆಯಬಹುದು.
ದಿನಪತ್ರಿಕೆಗೆ ಬದಲಾಗಿ ಮೃದುವಾಗಿರುವ ಮತ್ತು ಅಪಾಯಕಾರಿಯಲ್ಲದ ಬೇರೆ ವಸ್ತುವನ್ನು ಸಹ ಉಪಯೋಗಿಸಬಹುದು.



### ಪಿರಾಮಿಡನ್ನು ಮಾಡುವುದು


5 ಮಕ್ಕಳಿಗೆ 10 ಉಪಯೋಗಿಸಿ ಬಿಸಾಡುವ ಲೋಟಗಳನ್ನು ಕೊಡಿರಿ ಮತ್ತು ಅವರನ್ನು ಮೇಜಿನ ಮೇಲೆ ನಿಲ್ಲಿಸಿರಿ. ಒಂದು ಕೈ ಬಳಸಿ, ಪ್ರತಿಯೊಂದು ಮಗು ಲೋಟಗಳ ಗೋಪುರವನ್ನು ಕಟ್ಟಬೇಕು.
ಯಾವ ಮಗು ತನ್ನ ಗೋಪುರವನ್ನು ಮೊದಲು ಕಟ್ಟುತ್ತದೆಯೋ ಅದು ಗೆಲ್ಲುತ್ತದೆ!



## ಆಟದ ಆಯ್ಕೆಗಳು, ದಿನ 5


### ನಣ್ಣ ನಕ್ಷತ್ರದಂತಿರುವ ಗ್ರಹ ಹಿಡಿಯುವದು

ಹಿಸುಕಿರುವ ಹಾಳೆಯಿಂದ 20 “ಸಣ್ಣ ನಕ್ಷತ್ರದಂತಿರುವ ಗ್ರಹವನ್ನು” ಮಾಡಿರಿ.
5 ಮಕ್ಕಳ ತಂಡವು ಸರದಿ ಪ್ರಕಾರ ಆಟಬೇಕು.
ತಂಡದಿಂದ ಒಂದು ಮಗುವನ್ನು ಸುರಕ್ಷಿತವಾದ ಕುರ್ಚಿ ಅಥವಾ ವೇದಿಕೆಯ ಮೇಲೆ ಕುಳಿತುಕೊಳ್ಳಲು ಆರಿಸಿಕೊಳ್ಳಿರಿ, ಆ ಮಗು ಒಂದು ಬಟ್ಟಲನ್ನು ಹಿಡಿದುಕೊಂಡಿರಬೇಕು ಅದರೊಳಗೆ ಸಣ್ಣ ನಕ್ಷತ್ರದಂತಿರುವ ಗ್ರಹಗಳು ಇರಬೇಕು. ಉಳಿದ 4 ಮಕ್ಕಳು ಕುರ್ಚಿ/ವೇದಿಕೆಯಿಂದ ಸ್ವಲ್ಪ ದೂರ ನೆಲದಲ್ಲಿ ಸಾಮಾನ್ಯ ಅಳತೆಯ ಬಟ್ಟಲುಗಳನ್ನು ತಮ್ಮ ತಲೆಯ ಮೇಲೆ ಇಟ್ಟುಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ನಿಧಾನವಾಗಿ ತೂಗಾಡಿಸುತ್ತಾ ಕುಳಿತುಕೊಂಡಿರಬೇಕು. ತಮ್ಮ ಕಣ್ಣುಗಳನ್ನು ಸಣ್ಣ ನಕ್ಷತ್ರದಂತಿರುವ ಗ್ರಹದಿಂದ ಗಾಯಗಳಾಗದಂತೆ ಕಾಪಾಡಿಕೊಳ್ಳಲು ಪ್ರತಿಯೊಂದು ಮಗುವಿಗೆ ಒಂದು ಜೊತೆ ಗಾಗಲ್ಸ್ ಕೊಡಿರಿ! ಬಹುಶಃ 30 ಕ್ಷಣಗಳು ಅಥವಾ 1 ನಿಮಿಷ ಅಂದರೆ ನಿಗದಿತ ಸಮಯದೊಳಗೆ ಸಣ್ಣ ನಕ್ಷತ್ರದಂತಿರುವ ಗ್ರಹವನ್ನು ಹೊಂದಿರುವ ಮಗು ಸಾಧ್ಯವಾದಷ್ಟು ಬಟ್ಟಲುಗಳೊಳಗೆ ಎಸೆಯಬೇಕು.
ಎಷ್ಟು ನಕ್ಷತ್ರಗಳು ಬಿದ್ದಿವೆ ಎಂಬದನ್ನು ಬರೆದಿಟ್ಟುಕೊಳ್ಳಿರಿ ಮತ್ತು ಬೇರೆ ತಂಡಗಳೊಂದಿಗೆ ಇದೇ ಆಟವನ್ನು ಮುಂದುವರೆಸಿರಿ.
ಯಾವ ತಂಡದವರು ತಮ್ಮ ಬಟ್ಟಲುಗಳೊಳಗೆ ಹೆಚ್ಚು ನಕ್ಷತ್ರಗಳನ್ನು ಹಿಡಿದುಕೊಳ್ಳುತ್ತಾರೋ ಅವರು ಗೆಲ್ಲುತ್ತಾರೆ!
ಈ ಆಟವನ್ನು ಹೆಚ್ಚು ಕಷ್ಟಕರವನ್ನಾಗಿಸಲು – ಕುರ್ಚಿ/ವೇದಿಕೆಯ ಮೇಲಿರುವ ಮಗುವಿನ ಕಣ್ಣಿಗೆ ಬಟ್ಟೆಯನ್ನು ಕಟ್ಟಬಹುದು, ಆದರೆ ಮಗು ಕುರ್ಚಿ/ವೇದಿಕೆಯಿಂದ ಬೀಳದಂತೆ ವಯಸ್ಕರು ಯಾರಾದರು ನೋಡಿಕೊಳ್ಳಬೇಕು!



### ಕೇಕ್ ರಿಲೇ

ಈ ಆಟದ ಗುರಿ ಏನೆಂದರೆ ಪ್ರತಿಯೊಂದು ತಂಡದಿಂದ ಇಬ್ಬರು ಮಕ್ಕಳು ರಿಲೆಯಂತೆ ನೋಡುಗರಿಗೆ ಖುಷಿಯಾಗುವ ರೀತಿಯಲ್ಲಿ ಸಾಧ್ಯವಾದಷ್ಟು ಬೇಗ ಕೇಕ್ ಅನ್ನು ಅಲಂಕರಿಸಬೇಕು. ಸಮಯಕ್ಕೂ ಮುಂಚಿತವಾಗಿಯೇ ಐಸ್ಡ್ ಅಥವಾ ಅಲಂಕೃತವಾಗಿರದ ಎರಡು ಕೇಕ್ ಗಳನ್ನು ಸಿದ್ಧಮಾಡಿರಿ. ಕೇಕ್ ಗಳನ್ನು ಸ್ವಲ್ಪ ಹೆಚ್ಚಾಗಿ ಅಲಂಕಾರ ಮಾಡಲು ಆಪ್ರಾನ್ಸ್, ಐಸಿಂಗ್, ಕೆಲವು ಕತ್ತಿಗಳು ಮತ್ತು ಕೆಲವು ಸಿಂಪಡಿಗಳು ಅಥವಾ ಬೇರೆ ಪದಾರ್ಥಗಳನ್ನು ಒದಗಿಸಿರಿ. ನಾಯಕ ಶುರುಮಾಡಿ ಎಂದು ಹೇಳುವಾಗ, ಮಕ್ಕಳು ಆಪ್ರಾನ್ಸ್ (ಮುಂಗವಚ) ಹಾಕಬೇಕು, ಕೇಕ್ ಐಸ್ ಮಾಡಬೇಕು, ಅದನ್ನು ಅಲಂಕರಿಸಬೇಕು, ಮತ್ತು ಬೇಗ ಸ್ವಲ್ಪ ಕೇಕ್ ತಿನ್ನಬೇಕು. ಯಾವ ತಂಡ ಬೇಗ ಮಾಡುತ್ತದೆಯೋ ಅವರು ಗೆಲ್ಲುತ್ತಾರೆ. ಬೋನಸ್ ರೀತಿಯಲ್ಲಿ, ನಿಮ್ಮ ವಿಬಿಎಸ್ ಅಂತ್ಯದಲ್ಲಿ ಎಲ್ಲಾ ಮಕ್ಕಳಿಗೆ ಖುಷಿಯ ಆಯೋಜನೆಯಾಗಿ ಕೇಕ್ ಒದಗಿಸಿರಿ!



13657

www.ChildrenAreImportant.com
info@childrenareimportant.com

Equip & Grow
ಮಕ್ಕಳೇ ಪ್ರಮುಖರು